# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಉಪಲೋಕ್/ಎಂವೈಎಸ್/9466/2017/ಎಆರ್ಇ-6

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ: 03/10/2022
06

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: 1. ಶ್ರೀ. ವೀರಶೇಖರ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಬೇಳೂರು ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಮತ್ತು 2. ಶ್ರೀ. ಬಿ. ಕರುಣಾಕರ ಶೆಟ್ಟಿ, ಅಧ್ಯಕ್ಷರು, ಬೇಳೂರು ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ರವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ದೂರುದಾರರಾದ ಶ್ರೀ. ಮಧುಕರ್ ಶೆಟ್ಟಿ, ತಂದೆ ಲೇ. ಕೃಷ್ಣಪ್ಪ ಶೆಟ್ಟಿ, ಬೇಳೂರು ಗ್ರಾಮ, ಬೇಳೂರು ಭಟ್ನಮಕ್ಕಿ ಅಂಚೆ, ದೇವಸ್ಥಾನಬೆಟ್ಟು, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆರವರು 1. ಶ್ರೀ. ವೀರಶೇಖರ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಬೇಳೂರು ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಮತ್ತು 2. ಶ್ರೀ. ಬಿ. ಕರುಣಾಕರ ಶೆಟ್ಟಿ, ಅಧ್ಯಕ್ಷರು, ಬೇಳೂರು ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2. ದೂರುದಾರರು ತಮ್ಮ ದೂರಿನಲ್ಲಿ, 2ನೇ ಎದುರುದಾರರ ಸಹೋದರಿಯವರು ಶ್ರೀಮತಿ. ಅನಿತಾ ಇವರು ಬೇಳೂರು ಗ್ರಾಮದ ಸರ್ವೆ ಸಂ.101/1 ವಿಸ್ತೀರ್ಣ 0.68 ಎಕರೆ ಜಮೀನು ಮಾಲೀಕರಾಗಿರುತ್ತಾರೆ. ಸದರಿ ಜಮೀನು ಬೇಲೂರು-ಹುಣ್ಸೆಮಕ್ಕಿಯ ಪಿ.ಡಬ್ಲ್ಯೂ.ಡಿ ರಸ್ತೆಗೆ ಹೊಂದಿಕೊಂಡಿರುತ್ತದೆ. ಶ್ರೀಮತಿ. ಅನಿತಾ ರವರು ಸದರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಭೂಪರಿವರ್ತನೆಗಾಗಿ ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವ ಉದ್ದೇಶಕ್ಕಾಗಿ ತಾಲ್ಲೂಕು ಭೂಮಾಪಕರಿಗೆ ಪಿ.ಡಬ್ಲ್ಯೂ.ಡಿ ರಸ್ತೆಯೆಂದು ತಿಳಿಸದೆ, ಪಂಚಾಯತ್ ರಸ್ತೆ ಇರುತ್ತದೆ ಎಂದು ಸುಳ್ಳು ಮಾಹಿತಿ ನೀಡಿ, ಸುಳ್ಳು ನಕ್ಷೆಯನ್ನು ಮಾಡಿಸಿ ದಿನಾಂಕ: 05/03/2017 ರಂದು ನಗರ ಮತ್ತು ಗ್ರಾಮಾಂತರ ಯೋಜನೆ

ಇಲಾಖೆಯಿಂದ 0.30 ಎಕರೆ ಸ್ಥಳಕ್ಕೆ ವಾಣಿಜ್ಯ ಉದ್ದೇಶಕ್ಕಾಗಿ ಕಾನೂನು ಬಾಹಿರವಾಗಿ ನಿರಾಕ್ಷೇಪಣಾ ಪತ್ರವನ್ನು ಪಡೆದಿರುತ್ತಾರೆ. ಮುಂದುವರೆದು, ಶ್ರೀಮತಿ. ಅನಿತಾ ರವರು 1ನೇ ಎದುರುದಾರರಿಂದ 2ನೇ ಸುಳ್ಳು ನಕ್ಷೆಯನ್ನು ತಯಾರಿಸಿ, ಸದರಿ ನಕ್ಷೆಯಲ್ಲಿ 0.15 ಎಕರೆ ಸ್ಥಳ ಎಂದು ಹಾಗೂ ಪಂಚಾಯತ್ ರಸ್ತೆಗೆ ಹೊಂದಿಕೊಂಡಿದೆ ಎಂದು ಅರ್ಜಿ ಸಲ್ಲಿಸಿ, ಸದರಿ ಅರ್ಜಿಯ ಜೊತೆಗೆ ನಗರ ಮತ್ತು ಗ್ರಾಮಾಂತರ ಇಲಾಖೆಯಿಂದ ಪಡೆದ ನಕ್ಷೆ/ಆದೇಶವನ್ನು ಹಾಜರುಪಡಿಸದೇ ಆದೇಶವನ್ನು ಪಡೆದುಕೊಂಡಿರುತ್ತಾರೆ, ನಗರ ಮತ್ತು ಗ್ರಾಮಾಂತರ ಇಲಾಖೆಯಿಂದ ಪಡೆದುಕೊಂಡ ನಕ್ಷೆ ಹಾಗೂ 1ನೇ ಎದುರುದಾರರಿಂದ ಪಡೆದುಕೊಂಡು ನಕ್ಷೆಗಳ ಸ್ಥಳಗಳು ಬೇರೆ ಬೇರೆ ಆಗಿರುತ್ತವೆ.

3. ದೂರುದಾರರಿಗೆ ಈ ವಿಷಯ ಗೊತ್ತಾಗಿ, ಕುಂದಾಪುರ ಕಾರ್ಯನಿರ್ವಾಹಕ ಅಭಿಯಂತರರಿಗೆ, ಪಿ.ಡಬ್ಲ್ಯೂ.ಡಿ ರಸ್ತೆ ಮಾರ್ಜಿನ್ ಒಳಗೆ ವಾಣಿಜ್ಯ ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆ ಎಂದು ದೂರು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದು ತಿಳಿಸಿರುತ್ತಾರೆ. ಅರ್ಜಿಯನ್ನು ಸಲ್ಲಿಸಿದ ವಿಷಯ ಗೊತ್ತಾಗಿ ಶ್ರೀಮತಿ. ಅನಿತಾ ರವರು ಕುಂದಾಪುರ ತಾಲ್ಲೂಕು ಭೂಮಾಪಕರಿಗೆ ಸುಳ್ಳು ಮಾಹಿತಿಯನ್ನು ನೀಡಿ 3ನೇ ನಕ್ಷೆಯನ್ನು ತಯಾರಿಸಿ 1ನೇ ಎದುರುದಾರರಿಗೆ ವಾಣಿಜ್ಯ ಉದ್ದೇಶಕ್ಕಾಗಿ ನಿರಾಕ್ಷೇಪಣಾ ಪತ್ರ ಪಡೆಯುವ ಉದ್ದೇಶಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ನಕ್ಷೆಯಲ್ಲಿ 0.15 ಎಕರೆ ಸ್ಥಳ ಎಂದು ಹಾಗೂ ಜಿಲ್ಲಾ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ ಎಂದು ನಮೂದು ಮಾಡಿದ್ದು, ಆ ನಕ್ಷೆಯಲ್ಲೂ ಕೂಡ ಭೂಪರಿವರ್ತನಾ ಸ್ಥಳವು ಜಿಲ್ಲಾ ಮುಖ್ಯರಸ್ತೆಯಿಂದ 12 ಮೀಟರ್ ಅಂತರಲ್ಲಿರುತ್ತದೆ ಅಂತಾ ನಮೂದು ಮಾಡಿರುತ್ತಾರೆ. 2ನೇ ಮತ್ತು 3ನೇ ನಕ್ಷೆಗಳನ್ನು ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಿಂದ ಅನುಮತಿ ಪಡೆದುಕೊಂಡಿರುವುದಿಲ್ಲ. 1ನೇ ಮತ್ತು 2ನೇ ಎದುರುದಾರರು ಶ್ರೀಮತಿ. ಅನಿತಾ ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಪಂಚಾಯತ್ ರಾಜ್ ಕಾನೂನನ್ನು ಉಲ್ಲಂಘಿಸಿ ಅಕ್ರಮ ಎಸಗಿರುತ್ತಾರೆ ಅಂತಾ ಹೇಳಿರುತ್ತಾರೆ.

4. ಮುಂದುವರೆದು, ಕಾನೂನು ಪ್ರಕಾರವಾಗಿ ಪ್ರಸ್ತುತ ವಾಣಿಜ್ಯ ಭೂಪರಿವರ್ತನೆಗಾಗಿ 11E-ನಕ್ಷೆಯನ್ನು ಕಡ್ಡಾಯ ಹಾಜರುಪಡಿಸಬೇಕು, ಆದರೆ ಶ್ರೀಮತಿ. ಅನಿತಾ ರವರು 3ನೇ ಎದುರುದಾರರಾದ ತಹಶೀಲ್ದಾರ್, ಕುಂದಾಪುರ ಇವರಿಗೆ ವಾಣಿಜ್ಯ ಭೂಪರಿವರ್ತನೆ ಮಾಡುವ ಸಂದರ್ಭದಲ್ಲಿ 11 E-ನಕ್ಷೆಯನ್ನು ಹಾಜರುಪಡಿಸದೇ 3ನೇ ನಕ್ಷೆಯನ್ನು ದಿನಾಂಕ: 24/07/2017 ರಂದು ಭೂಪರಿವರ್ತನೆ ಆದೇಶವನ್ನು ಕಾನೂನು ಬಾಹಿರವಾಗಿ ಪಡೆದಿರುತ್ತಾರೆ.

ಹೊಸದಾಗಿ ಕಟ್ಟುತ್ತಿರುವ ಕಟ್ಟಡವು ರಸ್ತೆಯ ಮಧ್ಯ ಭಾಗದಿಂದ ಎಷ್ಟು ಅಂತರದಲ್ಲಿ ನಿರ್ಮಾಣವಾಗುತ್ತದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕುಂದಾಪುರ ಇವರಿಗೆ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಲೋಕೋಪಯೋಗಿ ಇಲಾಖೆಯು ದಿನಾಂಕ: 04/08/2017 ರಂದು ಮಾಹಿತಿ ಹಕ್ಕು ಅಧಿನಿಯಮ ಅಡಿಯಲ್ಲಿ ಸದರಿ ಕಟ್ಟಡವು ಹುಣ್ಸೆಮಕ್ಕಿ-ಬೇಳೂರು ಜಿಲ್ಲಾ ಮುಖ್ಯ ರಸ್ತೆಯ ಮಧ್ಯರೇಖೆಯಿಂದ 10 ಮೀಟರ್ ಅಂತರದಲ್ಲಿದೆ ಹಾಗೂ ಪಿ.ಡಬ್ಲ್ಯೂ.ಡಿ ರಸ್ತೆ ಮಾರ್ಜಿನಿನ 25 ಮೀಟರ್ ಅಂತರದಲ್ಲಿ ಕಟ್ಟಡ ನಿರ್ಮಾಣ ಮಾಡಬಾರದೆಂದು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: 6ಇ251 ಬೆಮಂಪ್ರ 2005 ದಿನಾಂಕ: 22/12/2005 ರ ಸುತ್ತೋಲೆಯನ್ನು ಲಗತ್ತಿಸಿ ಮಾಹಿತಿಯನ್ನು ನೀಡಿರುತ್ತಾರೆ. ಅಲ್ಲದೇ, ಲೋಕೋಪಯೋಗಿ ಇಲಾಖೆಯವರು 1ನೇ ಎದುರುದಾರರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ದಿನಾಂಕ: 19/08/2017 ರಂದು ಪತ್ರದ ಮುಖೇನ ತಿಳಿಸಿರುತ್ತಾರೆ ಆದರೆ 1ನೇ ಎದುರುದಾರರು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

5. ದೂರುದಾರರು ಮುಂದುವರೆದು, ದಿನಾಂಕ: 28/10/2017 ರಂದು 4ನೇ ಎದುರುದಾರರ ಕಛೇರಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು ಹಾಗೂ ತಡೆಯಾಜ್ಞೆಯನ್ನು ಕೋರಲಾಗಿದ್ದು, 4ನೇ ಎದುರುದಾರರು ಉದ್ದೇಶಪೂರ್ವಕವಾಗಿ ಒಂದು ತಿಂಗಳವರೆಗೆ ಮೇಲ್ಮನವಿ ಸಂಖ್ಯೆಯನ್ನು ನೀಡದೆ ದಿನಾಂಕ: 30/11/2017 ರಂದು ಮೇಲ್ಮನವಿ ನಂ.27/2017-18 ರಂತೆ ದಾಖಲಿಸಿಕೊಂಡು ತನಗೆ ಪ್ರತಿಗಳನ್ನು ನೀಡಿದ್ದು, ಆದರೆ ಎದುರುದಾರರಿಗೆ ಪ್ರತಿಗಳನ್ನು ಕಳುಹಿಸಿರುವುದಿಲ್ಲ ಎಂದು ಹೇಳಿರುತ್ತಾರೆ. ಸದರಿ ಮೇಲ್ಮನವಿಯ ವಿಚಾರಣೆಯನ್ನು ಸಹ ಮಾಡಿರುವುದಿಲ್ಲ ಎಂದು ಹೇಳಿರುತ್ತಾರೆ.

6. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸ್ಥಿರಾಸ್ತಿಯ ಭೂಪರಿವರ್ತನೆ ಮಾಡಿಸಿಕೊಳ್ಳುವ ಬಾಬ್ತು ಗ್ರಾಮ ಪಂಚಾಯಿತಿಯಿಂದ ನಿರಾಕ್ಷೇಪಣಾ ಪತ್ರ ಪಡೆಯಲು ನಮೂನೆ-11 E ನಕ್ಷೆ ಅಗತ್ಯವಿಲ್ಲ. ದೂರುದಾರರು ಹೇಳಿಕೊಂಡಂತೆ ಈ ಮೇಲೆ ಹೇಳಿದ ಸ್ಥಿರಾಸ್ತಿ ಬೇಳೂರು ಗ್ರಾಮದ ಸರ್ವೆ ನಂ.101/1 ವಿಸ್ತೀರ್ಣ 0.68 ಎಕರೆ ಈ ಸ್ಥಳಕ್ಕೆ ಹೊಂದಿಕೊಂಡು ಹುಣ್ಸೆಮಕ್ಕಿ-ಬೇಳೂರು ಪಿ.ಡಬ್ಲ್ಯೂ.ಡಿ ರಸ್ತೆ ಹಾದುಹೋಗುತ್ತಿಲ್ಲ. ಈ ಪ್ರಕರಣದ ನೋಟಿಸು ಜಾರಿಯಾದ ನಂತರ ತಾನು ಸ್ವತಃ ಸ್ಥಳ ತನಿಖೆ ನಡೆಸಿದ್ದು, ಸದರಿ ಸರ್ವೆ ನಂ.101/1ರ ಉತ್ತರ ದಿಕ್ಕಿನಲ್ಲಿ ಹಾದುಹೋಗುತ್ತಿರುವ ಬೇಳೂರು-ಉಳ್ತೂರು ರಸ್ತೆ

ಖಾಸಗಿ ಸ್ಥಳದಲ್ಲಿ ಹಾದುಹೋಗುತ್ತಿದೆ ಮತ್ತು ಗ್ರಾಮೀಣ ರಸ್ತೆ ಎನ್ನುವುದನ್ನು ಖಚಿತ ಪಡಿಸಿಕೊಂಡಿರುತ್ತೇನೆ ಅಂತಾ ಹೇಳಿರುತ್ತಾರೆ. ನಿಜವಾಗಿ ಹುಣ್ಸೆಮಕ್ಕಿ-ಬೇಳೂರು ಪಿ.ಡಬ್ಲ್ಯೂ.ಡಿ ರಸ್ತೆ ಹುಣ್ಸೆಮಕ್ಕಿ ಎಂಬ ಪ್ರದೇಶದಿಂದ ಬೇಳೂರು ಗ್ರಾಮದ ಕೋಣಬಗೆ ಎಂಬ ಪ್ರದೇಶಕ್ಕೆ ಹಾದುಹೋಗುತ್ತಿದ್ದು ಶ್ರೀಮತಿ. ಅನಿತಾ ಇವರ ಜಮೀನನ ಸಮೀಪದಿಂದ ಹಾದುಹೋಗುತ್ತಿಲ್ಲ ಎಂದು ಹೇಳಿರುತ್ತಾರೆ.

7. ಮುಂದುವರೆದು, ಶ್ರೀಮತಿ. ಅನಿತಾ ರವರು ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ ಕೋರಿ ಇವರ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದು, ಅದರ ಜೊತೆಗೆ ಸೂಕ್ತ ದಾಖಲಾತಿಯನ್ನು ಸಲ್ಲಿಸಿರುತ್ತಾರೆ. ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಮತ್ತು ನಿಯಮದಂತೆ ಅವರ ಅರ್ಜಿಯನ್ನು ಸಾಮಾನ್ಯ ಸಭೆಯಲ್ಲಿ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿದ್ದು, ಗ್ರಾಮ ಪಂಚಾಯಿತಿ ದಿನಾಂಕ: 04/08/2017ರ ನಿರ್ಣಯ ಸಂಖ್ಯೆ: 5/2017-18 ರಂತೆ ಕೈಗೊಂಡ ನಿರ್ಣಯದಲ್ಲಿ ಸದರಿಯವರಿಗೆ ಕಟ್ಟಡ ನಿರ್ಮಿಸಲು ಪರವಾನಿಗೆ ನೀಡಲು ನಿರ್ಣಯ ಕೈಗೊಂಡಿದ್ದು, ಆ ಪ್ರಕಾರ ತಾನು ಪರವಾನಿಗೆಯನ್ನು ನೀಡಿರುತ್ತೇನೆ ಎಂದು ಹೇಳಿರುತ್ತಾರೆ. ದೂರುದಾರರು ಸದರಿ ಪಂಚಾಯಿತಿ ನಿರ್ಣಯವನ್ನು ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ಕುಂದಾಪುರ ಇವರ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ಕಾನೂನಾತ್ಮಕವಾಗಿ ವಿಚಾರಣೆ ಮಾಡಿ ದಿನಾಂಕ: 14/09/2018 ರಂದು ಮೇಲ್ಮನವಿಯನ್ನು ವಜಾಗೊಳಿಸಿರುತ್ತಾರೆ ಎಂದು ಹೇಳಿರುತ್ತಾರೆ.

8. 2ನೇ ಎದುರುದಾರರು 1ನೇ ಎದುರುದಾರರು ಹೇಳಿದ ಆಕ್ಷೇಪಣೆಯನ್ನು ಪುನರುಚ್ಚಿಸಿರುತ್ತಾರೆ. 3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

9. 4ನೇ ಎದುರುದಾರರ ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ತಮ್ಮ ಮುಂದ ಮೇಲ್ಮನವಿಯನ್ನು ಸಲ್ಲಿಸಿದ್ದು, ಅದನ್ನು ವಿಚಾರಣೆಯನ್ನು ಮಾಡಿ ಆದೇಶವನ್ನು ಮಾಡಿರುತ್ತೇನೆ ಎಂದು ಹೇಳಿರುತ್ತಾರೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 64(1)(2) ಅಥವಾ (3) ನೇ ಉಪ ಪ್ರಕರಣ ಅಡಿಯಲ್ಲಿ ಗ್ರಾಮ ಪಂಚಾಯಿತಿ ಮಾಡಿರುವ ಯಾವುದೇ ಆದೇಶ ಅಥವಾ ನಿರ್ದೇಶನ ಅಥವಾ ನೋಟಿಸಿನ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಅಪೀಲು ಸಲ್ಲಿಸತಕ್ಕದ್ದು ಮತ್ತು ಅಂತಹ ಅಪೀಲಿನ ಬಗ್ಗೆ ಅವರ ತೀರ್ಮಾನವು ಅಂತಿಮವಾಗಿರುತ್ತದೆ ಎಂಬುದಾಗಿ

ವಿವರಿಸಲಾಗಿದೆ. ತಾನು ಮೇಲ್ಮನವಿಯ ಮೇಲೆ ಮಾಡಿದ ಆದೇಶದ ವಿರುದ್ಧ ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯ ಬೆಂಗಳೂರಿನಲ್ಲಿ ರಿಟ್ ಅರ್ಜಿ ಸಲ್ಲಿಸಬಹುದು ವಿನಃ ಬೇರೆ ಯಾವುದೇ ಪ್ರಾಧಿಕಾರದ ಮುಂದೆ ಅದನ್ನು ಪ್ರಶ್ನಿಸಲು ಯಾವುದೇ ಅವಕಾಶ ಇರುವುದಿಲ್ಲ. ಆದ್ದರಿಂದ, ದೂರುದಾರರು ಮಾಡಿದ ದೂರು ಸತ್ಯಕ್ಕೆ ದೂರವಾಗಿರುತ್ತದೆ ಅಂತಾ ಹೇಳಿರುತ್ತಾರೆ.

10. ನಂತರ ಕಂಡಿಕೆ 55ರಲ್ಲಿ 5ನೇ ಎದುರುದಾರರನ್ನು ಪ್ರಕರಣದಲ್ಲಿ ಸೇರಿಸಿಕೊಳ್ಳಲು ಕೇಳಿಕೊಂಡಿದ್ದು ಅದರಿಂದ ಆದೇಶವಾಗಿದ್ದು, 5ನೇ ಎದುರುದಾರರಾದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ನಂ.2 ಉಪವಿಭಾಗ, ಕುಂದಾಪುರ ಇವರನ್ನು ಎದುರುದಾರರನ್ನಾಗಿ ಸೇರ್ಪಡಿಸಿದ್ದು, ಅವರಿಂದ ಆಕ್ಷೇಪಣೆಯನ್ನು ಸಲ್ಲಿಸಲು ಕೇಳಿಕೊಂಡಿದ್ದು, ಆ ಪ್ರಕಾರ ಆಕ್ಷೇಪಣೆಯಲ್ಲಿ ದೂರುದಾರರು ಸಲ್ಲಿಸಿದ ಅರ್ಜಿಯ ಮೇಲೆ ಈಗಾಗಲೇ ತಮ್ಮ ಕಛೇರಿ ಪತ್ರ ದಿನಾಂಕ: 24/09/2007ರಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಯ ಅಂಚಿನಲ್ಲಿ ಕಟ್ಟಡವನ್ನು ನಿರ್ಮಿಸಲು ಇರುವ ಷರತ್ತಿನ ಬಗ್ಗೆ ಕಾರ್ಯನಿರ್ವಾಹಣಾ ಅಧಿಕಾರಿ ತಾಲ್ಲೂಕು ಪಂಚಾಯತಿ, ಕುಂದಾಪುರ ಹಾಗೂ ಗ್ರಾಮ ಪಂಚಾಯಿತಿಗಳಿಗೆ ಮಾಹಿತಿ ನೀಡಲಾಗಿರುತ್ತದೆ ಹಾಗೂ ದಿನಾಂಕ: 19/08/2017ರಲ್ಲಿ ಸದರಿ ಕಟ್ಟಡದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪರವಾನಿಗೆ ನೀಡುವ ಅಧಿಕಾರ ಹೊಂದಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರಿಗೆ ಪತ್ರ ಬರೆಯಲಾಗಿರುತ್ತದೆ. ಆದ್ದರಿಂದ, 1ನೇ ಎದುರುದಾರರು ಅಂದರೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಬೇಕಾಗುತ್ತದೆ ಅಂತಾ ತಿಳಿಸಿರುತ್ತಾರೆ.

11. ಈ ಪ್ರಕರಣದಲ್ಲಿ 4ನೇ ಎದುರುದಾರರಾದ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ ಕುಂದಾಪುರ ಇವರ ಅಪೀಲು ನಂ.11/2017-18 ರಲ್ಲಿ ದಿನಾಂಕ: 14/09/2018 ರಂದು ಮಾಡಿದ ಆದೇಶದ ಪ್ರತಿಯನ್ನು ಸಲ್ಲಿಸಿದ್ದು, ಸದರಿ ಆದೇಶದಲ್ಲಿ "ಶ್ರೀಮತಿ. ಅನಿತಾ ಇವರು ಮುಖ್ಯ ಜಿಲ್ಲಾ ರಸ್ತೆಗಳಿಂದ 25 ಮೀಟರ್ ವ್ಯಾಪ್ತಿಯೊಳಗೆ ಯವುದೇ ಕಟ್ಟಡಗಳನ್ನು ನಿರ್ಮಿಸಕೂಡದು ಎಂಬ ಬಗ್ಗೆ ಕರ್ನಾಟಕ ಸರ್ಕಾರವು ಹೊರಡಿಸಿರುವ ಸುತ್ತೋಲೆ ಸಂಖ್ಯೆ: ನಅಇ 251 ಬೆಮಪ್ರಾ 2005, ಉಲ್ಲಂಘಿಸಿ ಜಿಲ್ಲಾ ಮುಖ್ಯ ರಸ್ತೆಯ ಮಧ್ಯ ರೇಖೆಯಿಂದ 10.00 ಮೀಟರ್ ಅಂತರದಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿರುವುದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು, ಲೋ.ಬಂ.ಒ.ಜ.ಇ, ನಂ. 2ನೇ ಉಪ ವಿಭಾಗ,

ಕುಂದಾಪುರ ಇವರು ಮಾಹಿತಿ ಹಕ್ಕು ಕಾಯಿದೆಯಡಿ ಕೊಟ್ಟಿರುವ ಲಿಖಿತ ಮಾಹಿತಿಯ ಪತ್ರ ಸಂಖ್ಯೆ: ಸ.ಕಾ.ಇಂ.ಲೋ.ಇ.ಕುಂ. ಮಾಹಿತಿ ಹಕ್ಕು ಅಧಿನಿಯಮ:2017-18/9222-23, ದಿನಾಂಕ: 04/08/2017 ರನ್ವಯ ಕಂಡು ಬಂದಿರುತ್ತದೆ, ಇದು ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 251 ಬೆಮಪ್ರಾ 2005, ದಿನಾಂಕ: 22/12/2005 ನೇದ್ದರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ" ಅಂತಾ ಹೇಳಿರುತ್ತಾರೆ. ತಮ್ಮ ಆದೇಶವನ್ನು ಈ ಕೆಳಗಿನಂತೆ ಮಾಡಿರುತ್ತಾರೆ.

## ಮೇಲ್ಮನವಿ ಪ್ರಾಧಿಕಾರ ನ್ಯಾಯಾಲಯದ ಆದೇಶ

"ಮೇಲ್ಮನವಿಯನ್ನು ರದ್ದುಪಡಿಸಿದೆ ಹಾಗೂ ಎರಡನೇ ಪ್ರತಿವಾದಿಯು ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 251 ಬೆಮಪ್ರಾ 2005, ದಿನಾಂಕ: 22/12/2005 ನೇದ್ದರನ್ನು ಉಲ್ಲಂಘಿಸಿ ಮಾಡುತ್ತಿರುವ ನಿರ್ಮಾಣದ ಬಗ್ಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ ಸಂಖ್ಯೆ: 64(3) ರನ್ವಯ ನಿಯಮಾನುಸಾರ ಹಾಗು ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ:939:ಗ್ರಾಪಂಅ:2016(1) ದಿನಾಂಕ: 19/11/2016 ರನ್ವಯ ಸೂಕ್ತ ಕ್ರಮ ಕೈಗೊಳ್ಳುವಂತೆ ಪಂಚಯತ್ ಅಭಿವೃದ್ಧಿ ಅಧಿಕಾರಿ, ಬೇಳೂರು ಗ್ರಾಮ ಪಂಚಾಯತಿ ಇವರಿಗೆ ಆದೇಶಿಸಿದೆ. ಈ ಆದೇಶವನ್ನು ದಿನಾಂಕ: 14ನೇಯ ಸೆಪ್ಟೆಂಬರ್ 2018 ನೇದ್ದರಂದು ಪೂರ್ವಾಹ್ನ 11.00 ಗಂಟೆಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ ಸಂಖ್ಯೆ: 65(5) ರನ್ವಯ ಮೇಲ್ಮನವಿ ಪ್ರಾಧಿಕಾರ ಹಾಗೂ ಕಾರ್ಯನಿರ್ವಾಹಕ ಅಧಿಕಾರಿ, ಕುಂದಾಪುರ ತಾಲ್ಲೂಕು ಪಂಚಾಯತ್ ಇವರ ತೆರೆದ ಮೇಲ್ಮನವಿ ಪ್ರಾಧಿಕಾರ ನ್ಯಾಯಾಲಯದಲ್ಲಿ ಅಂತಿಮ ತೀರ್ಮಾನವನ್ನು ಘೋಷಿಸಿದೆ."

12. ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿ, ಎದುರುದಾರರು ಸರ್ಕಾರದ ಸುತ್ತೋಲೆ ಹಾಗೂ ಆದೇಶವನ್ನು ಪಾಲಿಸದೆ, ಅನಿತಾ ಶೆಡ್ತಿ ಇವರಿಗೆ ಸಹಾಯ ಮಾಡಿರುತ್ತಾರೆ. ಕಟ್ಟಡವನ್ನು ಕಟ್ಟುವ ಮೊದಲೆ ದಿನಾಂಕ 18-02-1992 ರಂದು ಸರ್ಕಾರದ ನಡಾವಳಿಗಳ ಪ್ರಕಾರ ಬೇಳೂರು-ಹುಣ್ಸೆಮಕ್ಕಿ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯಾಗಿ ಮೇಲ್ದರ್ಜೆಗೆ ಏರಿಸಲ್ಪಟ್ಟಿರುತ್ತದೆ. ಆದರೂ ಸಹ ರಸ್ತೆ ಮಾರ್ಜಿನ್‌ನಲ್ಲಿ ಕಟ್ಟಡ ಕಟ್ಟಲು ಅನುಮತಿಯನ್ನು ನೀಡಿದ್ದಾರೆ. 25

ಮೀಟರ್ ಒಳಗಡೆ ಇರುವ ಕಟ್ಟಡವನ್ನು ಒಡೆಯಲು ಬೇರೆಯವರಿಗೆ ನೋಟಿಸ್ ಅನ್ನು ಕೊಡುತ್ತಾರೆ ಮತ್ತು ಉಚ್ಚ ನ್ಯಾಯಾಲಯಕ್ಕೆ ದಾವೆಯನ್ನು ದಾಖಲು ಮಾಡಿದ್ದಾರೆ. ಅಪೀಲಿನಲ್ಲಿ ಆದೇಶವಾದರೂ ಸಹ ಅನಿತಾ ಶೆಟ್ಟಿ ಇವರ ವಾಣಿಜ್ಯ ಕಟ್ಟಡವನ್ನು ತೆರವು ಮಾಡಿರುವುದಿಲ್ಲ. ಇನ್ನೊಂದು ಪ್ರಕರಣದಲ್ಲಿ ಸಹ ವಾಣಿಜ್ಯ ಕಟ್ಟಡ ತೆರವುಗೊಳಿಸಬೇಕೆಂದು ಸಹಕಾರ ಸಂಘದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆಯನ್ನು ದಾಖಲು ಮಾಡಿದ್ದಾರೆ. ಆದರೆ ಅನಿತಾ ಶೆಟ್ಟಿ ಇವರ ವಾಣಿಜ್ಯ ಕಟ್ಟಡದ ಬಗ್ಗೆ ಯಾವುದೇ ಕ್ರಮ ಕೈಗೊಳುತ್ತಿಲ್ಲ. ಆದ್ದರಿಂದ, ಎದುರುದಾರರ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

13. ಕಡತವನ್ನ ಪರಿಶೀಲಿಸಲಾಗಿ, ಕಂಡುಬರುವ ಅಂಶಗಳೇನೆಂದರೆ, ಕರ್ನಾಟಕ ಸರ್ಕಾರದ ಸುತ್ತೋಲೆ ಸಂ:ನಅಇ 251 ಬೆಮಪ್ರಾ 2005, ದಿನಾಂಕ 22-12-2005ನೇದ್ದನ್ನು ಉಲ್ಲಂಘಿಸಿ ಮಾಡುತ್ತಿರುವ ನಿರ್ಮಾಣದ ಬಗ್ಗೆ ಕರ್ನಾಟಕ ಗ್ರಾಮ ಸ್ವರಾಜ್ ಪಂಚಾಯತ್ ರಾಜ್ಯ ಅಧಿನಿಯಮ 1993 ರ ಪ್ರಕರಣ ಸಂ. 64(3) ರನ್ವಯ ನಿಯಮಾನುಸಾರ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಪಂಅ:2016(1) ದಿ:19-11-2016 ರನ್ವಯ ಸೂಕ್ತ ಕ್ರಮ ಕೈಗೊಳ್ಳುವಂತೆ ಬೇಳೂರು ಗ್ರಾಮ ಪಂಚಾಯತಿ ಪಿ.ಡಿ.ಓ ರವರಿಗೆ ಆದೇಶಿಸಲಾಗಿದೆ. ಸರ್ಕಾರದ ಆದೇಶ ಸಂ.ಪಿಡಬ್ಲ್ಯೂಡಿ 68 : ಸಿಆರ್ಎಂ 89 (6) ಬೆಂಗಳೂರು ದಿನಾಂಕ 06-05-1992 ರ ಪ್ರಕಾರ ಹುಣ್ಸೆಮಕ್ಕಿ-ಬೇಳೂರು-ಉಳ್ತೂರು ರಸ್ತೆಯನ್ನು ಜಿಲ್ಲಾ ಮುಖ್ಯರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಲಾಗಿರುತ್ತದೆ. ಜಿಲ್ಲಾ ಮುಖ್ಯ ರಸ್ತೆ ಮಧ್ಯಭಾಗದಿಂದ 25 ಮೀಟರ್ ಅಂತರದಲ್ಲಿ ಯಾವ ಕಟ್ಟಡಗಳನ್ನು ನಿರ್ಮಿಸಬಾರದೆಂದು ಸರ್ಕಾರ ದಿನಾಂಕ 22-12-2005ರಲ್ಲಿ ಸುತ್ತೋಲೆಯನ್ನು ಹೊರಡಿಸಿದೆ.

14. ಶ್ರೀಮತಿ ಅನಿತಾ ಶೆಟ್ಟಿ ಇವರು ಜಿಲ್ಲಾ ಮುಖ್ಯ ರಸ್ತೆಯಿಂದ 10 ಮೀಟರ್ ಅಂತರದಲ್ಲಿ ವಾಣಿಜ್ಯ ಕಟ್ಟಡವನ್ನು ಕಟ್ಟುತ್ತಿದ್ದರು ಸಹ 1 ಮತ್ತು 2ನೇ ಎದುರುದಾರರು ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಮುಂದುವರೆದು ದಿನಾಂಕ 14-09-2018 ರಂದು ಕುಂದಾಪುರ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು ಅಪೀಲ್ ಸಂಖ್ಯೆ:11/2017-18 ರಲ್ಲಿ ಹೊರಡಿಸಿರುವ ಆದೇಶವನ್ನು 1 ಮತ್ತು 2ನೇ ಎದುರುದಾರರು ಪಾಲನೆ ಮಾಡಿರುವುದಿಲ್ಲ. ಆದ್ದರಿಂದ, 1 ಮತ್ತು 2ನೇ ಎದುರುದಾರರು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 3 ರಿಂದ 5ನೇ ಎದುರುದಾರರನ್ನು ಕೈಬಿಡಲಾಗಿದೆ.

15. ಆದ್ದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(ii) ಮತ್ತು (iii) ರನ್ವಯ 1 ಮತ್ತು 2ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 1ನೇ ಎದುರುದಾರರಾದ ಶ್ರೀ. ವೀರಶೇಖರ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಬೇಳೂರು ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆರವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಹಾಗೂ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಮತ್ತು 2ನೇ ಎದುರುದಾರರಾದ ಶ್ರೀ. ಬಿ. ಕರುಣಾಕರ ಶೆಟ್ಟಿ, ಅಧ್ಯಕ್ಷರು, ಬೇಳೂರು ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ರವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಆಕ್ಟ್ 1993ರ ಕಲಂ. 43'ಎ'ರನ್ವಯ ಇಲಾಖಾ ವಿಚಾರಣೆಯನ್ನು ಕೈಗೊಂಡು ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತುಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

16. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6/10/21

[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]

**ಉಪಲೋಕಾಯುಕ್ತ–1,**

**ಕರ್ನಾಟಕ ರಾಜ್ಯ, ಬೆಂಗಳೂರು.**